## ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ, ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್. ವೃತ್ತ, ಬೆಂಗಳೂರು-560 001
ದೂರವಾಣಿ : 91-080-22212408
ಫ್ಯಾಕ್ಸ್: 91-080-22277528

ದಿನಾಂಕ: 25 .8.2009.

ಸಂ. ತಾಂತ್ರಿಕ.ಆಡಳಿತ.ಸುತ್ತೋಲೆ. 16 /09-10

## ಸುತ್ತೋಲೆ

ವಿಷಯ : 11ಇ ನಕ್ಷೆ ತಯಾರಿಸುವ ಅಥವಾ ಸಮಯದಲ್ಲಿ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾದಲ್ಲಿ ಪರಿಗಣಿಸಬೇಕಾದ ಅಂಶಗಳು.

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂ.ತಾಂ.ಪ.ಭೂ.ಘಟಕ.65/08-09 ದಿ:24-11-2008.

★★★

ದಿನಾಂಕ: 27.11.2008 ರಂದು ಈ ಕಛೇರಿಯಿಂದ ನೀಡಲಾದ ಸುತ್ತೋಲೆ ಸಂಖ್ಯೆ: ತಾಂ.ಪ.ಭೂ.ಘಟಕ.65/08-09 ರ ಮೇರೆಗೆ ಮ್ಯುಟೇಷನ್ ಪೂರ್ವ ನಕ್ಷೆಯನ್ನು ಸಿದ್ಧಪಡಿಸುವ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಈ ಮಾರ್ಗಸೂಚಿಗಳನ್ನು ಮುಂದುವರೆಸಿ ಹಲವು ಪರವಾನಗಿ ಭೂಮಾಪಕರು ಮತ್ತು ಸಾರ್ವಜನಿಕರು ಕೋರಿರುವ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ಹೆಚ್ಚುವರಿ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ಸರ್ವೆ ನಂಬರಿನ ಆರ್.ಟಿ.ಸಿ. ವಿಸ್ತೀರ್ಣಕ್ಕೂ ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿ, ಆರ್.ಟಿ.ಸಿ.ದಾರರೆಲ್ಲರೂ ಅನುಭವದಂತೆ ಹಕ್ಕುದಾಖಲೆ ಅಂತಿಮಗೊಳಿಸಲು ಒಪ್ಪಿಗೆ ನೀಡಿದರೂ ಸಹ ಪರವಾನಗಿ ಭೂಮಾಪಕರು ನಕ್ಷೆ ತಯಾರಿಸದೇ, ಕಛೇರಿಗೆ ಕಡತಗಳನ್ನು ಹಿಂದಿರುಗಿಸಲು ಮತ್ತು ಇಲಾಖಾ ಭೂಮಾಪಕರು ನಿಯಮಾನುಸಾರ ಮೊದಲು ದುರಸ್ತಿ ಮಾಡಿ, ಗಡಿ ನಿರ್ಧಾರವಾದ ನಂತರ, ಹಕ್ಕುದಾರರ ವಿಸ್ತೀರ್ಣದ ಪೈಕಿ ನಕ್ಷೆ ತಯಾರಿಸಲು ಸೂಚನೆ ನೀಡಲಾಗಿದೆ. ಮುಂದುವರೆದು ಈ ಮೂಲಕ ಸ್ಪಷ್ಟೀಕರಣ ನೀಡುವುದೇನೆಂದರೆ, ಆರ್.ಟಿ.ಸಿ. ವಿಸ್ತೀರ್ಣಕ್ಕೂ ಹಕ್ಕುದಾರರ ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿ ಆರ್.ಟಿ.ಸಿ.ದಾರರು ಒಪ್ಪಿಗೆ ನೀಡಿದರೂ ಮತ್ತು ಒಪ್ಪಿಗೆ ನೀಡದಿದ್ದರೂ ಪರವಾನಗಿ ಭೂಮಾಪಕರು ನಕ್ಷೆ ತಯಾರಿಸದೇ ಕಡತ ಹಿಂದಿರುಗಿಸುವುದು. ಇಂತಹ ಪ್ರಕರಣಗಳನ್ನು ಇಲಾಖಾ ಭೂಮಾಪಕರ ಮೂಲಕ ನಿಯಮಾನುಸಾರ ದುರಸ್ತಿ ಮೂಲಕ ಗಡಿ ನಿರ್ಧಾರವಾದ ನಂತರ ಅದರಲ್ಲಿನ ವಿಸ್ತೀರ್ಣಕ್ಕೆ ಪರವಾನಗಿ ಭೂಮಾಪಕರು ನಕ್ಷೆ ತಯಾರಿಸಬಹುದಾಗಿದೆ.

ಮುಂದುವರೆದು ಸರ್ವೆ ನಂಬರಿನ ಆರ್.ಟಿ.ಸಿ. ವಿಸ್ತೀರ್ಣಕ್ಕೂ, ಹಕ್ಕುದಾರರ ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸವಿಲ್ಲದೇ ಸಮಾನವಾಗಿದ್ದಲ್ಲಿ ಆರ್.ಟಿ.ಸಿ.ಯ ಎಲ್ಲಾ ಹಕ್ಕುದಾರರಿಗೂ ಕಡ್ಡಾಯವಾಗಿ ನಕ್ಷೆ ತಯಾರಿಸುವುದು ಹಾಗೂ ಆರ್.ಟಿ.ಸಿ.ಯಲ್ಲಿಯ ನಮೂದಾಗಿರುವ ವಿಸ್ತೀರ್ಣಕ್ಕೂ ಅನುಭವದ ವಿಸ್ತೀರ್ಣವು ಸಮಾನವಾಗಿದ್ದು, ಆರ್.ಟಿ.ಸಿ.ದಾರರು ಒಪ್ಪಿಗೆ ನೀಡದೇ ಇದ್ದರೂ ಸಹ ಎಲ್ಲರಿಗೂ ಪ್ರತ್ಯೇಕ ಬ್ಲಾಕುಗಳನ್ನು ರಚಿಸುವ ಮೂಲಕ ಸಿದ್ಧಪಡಿಸಿ ಸಲ್ಲಿಸುವುದು.

ಯಾವುದೇ ಪ್ರಕರಣದಲ್ಲಿ ಆರ್.ಟಿ.ಸಿ.ಯಲ್ಲಿ ನಮೂದಾಗಿರುವ ವಿಸ್ತೀರ್ಣಕ್ಕೂ ಅರ್ಜಿ ಸಲ್ಲಿಸಿರುವ ಹಕ್ಕುದಾರರ ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿಯೂ ಪರವಾನಗಿ ಭೂಮಾಪಕರು ನಕ್ಷೆ ತಯಾರಿಸದೇ ಕಛೇರಿಗೆ ಹಿಂದಿರುಗಿಸುವುದು ಹಾಗೂ ಇಂತಹ ಪ್ರಕರಣಗಳನ್ನು ಇಲಾಖಾ ಭೂಮಾಪಕರು ನಿಯಮಾನುಸಾರ

Sslr-cst
G

ಪೋಡಿ ದುರಸ್ತಿ ಮಾಡಿದ ನಂತರವೇ ಅರ್ಜಿದಾರರು ಮಾರಾಟ ಮಾಡುವ ವಿಸ್ತೀರ್ಣಕ್ಕೆ ಅಗತ್ಯವಿದ್ದಲ್ಲಿ ಪರವಾನಗಿ ಭೂಮಾಪಕರುಗಳಿಗೆ ಪುನ: ಹೆಚ್ಚಿನ ಶುಲ್ಕ ಪಡೆಯದೇ ಈ ಹಿಂದೆ ಕಡತ ವಿತರಣೆ ಮಾಡಿದ್ದ ಪರವಾನಗಿ ಭೂಮಾಪಕರಿಗೆ ನಕ್ಷೆ ತಯಾರಿಸಲು ವಿತರಿಸುವುದು.

ಅರ್ಜಿದಾರರು ಆರ್.ಟಿ.ಸಿ.ಯ ಇತರ ಹಕ್ಕುದಾರರೊಂದಿಗೆ ತಮ್ಮ ಗಡಿ ಬಗ್ಗೆ ವಿವಾದ ಇಲ್ಲದೇ ಇದ್ದಲ್ಲಿ, ಪರವಾನಗಿ ಭೂಮಾಪಕರ ಮೂಲಕ ತಮ್ಮ ಹಕ್ಕಿನ ವಿಸ್ತೀರ್ಣಕ್ಕೆ ಮತ್ತು ಅದರೊಳಗಿನ ಮಾರಾಟ ಮಾಡುವ ವಿಸ್ತೀರ್ಣಕ್ಕೆ ನಕ್ಷೆಯನ್ನು ಅನುಭವದ ವಿಸ್ತೀರ್ಣ ಮತ್ತು ಆರ್.ಟಿ.ಸಿ.ಯಲ್ಲಿ ನಮೂದಾಗಿರುವ ವಿಸ್ತೀರ್ಣವನ್ನು ಆಧರಿಸಿ ಪರವಾನಗಿ ಭೂಮಾಪಕರು ತಯಾರಿಸಬಹುದು.

ಅರ್ಜಿದಾರರಿಗೆ ತಮ್ಮ ಗಡಿಯ ಬಗ್ಗೆ ಇತರ ಹಕ್ಕುದಾರರೊಂದಿಗೆ ವಿವಾದ ಇಲ್ಲದೇ ಇದ್ದಲ್ಲಿ ಹಾಗೂ ಇತರ ಹಕ್ಕುದಾರರ ನಡುವೆ ಅವರ ಗಡಿಗಳ ನಡುವೆ ಆರ್.ಟಿ.ಸಿ. ವಿಸ್ತೀರ್ಣಕ್ಕೂ, ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದು, ತಮ್ಮ ಅನುಭವದ ವಿಸ್ತೀರ್ಣಕ್ಕೆ ನಕ್ಷೆ ತಯಾರಿಸಲು ಒಪ್ಪಿಗೆ ನೀಡಿದರೂ ಸಹ (ಆರ್.ಟಿ.ಸಿ. ವಿಸ್ತೀರ್ಣ ಮತ್ತು ಅನುಭವದ ವಿಸ್ತೀರ್ಣ ವ್ಯತ್ಯಾಸವಿದ್ದ ಪ್ರಸಂಗಗಳಲ್ಲಿ) ಅಂತಹ ಹಕ್ಕುದಾರರಿಗೆ ಪ್ರತ್ಯೇಕ ಬ್ಲಾಕ್ ರಚಿಸದೇ ವಿವಾದರಹಿತ ಅರ್ಜಿದಾರರ ಗಡಿ ನಿರ್ಧರಿಸಿ ನಕ್ಷೆ ತಯಾರಿಸಬಹುದಾಗಿರುತ್ತದೆ. ಅಳತೆ ಸಮಯದಲ್ಲಿ ವಿವಾದವಿರುವ ಹಕ್ಕುದಾರರನ್ನು ಒಂದೇ ಬ್ಲಾಕ್‌ನಲ್ಲಿ ಸೇರಿಸಿ ನಕ್ಷೆ ತಯಾರಿಸುವುದು. ಮಧ್ಯದಲ್ಲಿ ಅಥವಾ ಸರ್ವೆ ನಂಬರ್‌ನ ಇತರ ಸ್ಥಳದಲ್ಲಿ ಇತರ ಹಕ್ಕುದಾರರಿಗೆ ತಮ್ಮ ಅಕ್ಕಪಕ್ಕದ ಹಕ್ಕುದಾರರ ಮಧ್ಯೆ ವಿವಾದ ಇಲ್ಲದಿದ್ದಲ್ಲಿ ಆರ್.ಟಿ.ಸಿ. ವಿಸ್ತೀರ್ಣ ಮತ್ತು ಅನುಭವ ತಾಳೆಯಾದಲ್ಲಿ ಪ್ರತ್ಯೇಕ ಬ್ಲಾಕ್‌ಗಳಂತೆ ನಕ್ಷೆ ತಯಾರಿಸುವುದು.

ಉದಾಹರಣೆಗೆ: ಸ.ನಂ. 10 ರಲ್ಲಿ ನಾಲ್ಕು ಮಂದಿ ಹಕ್ಕುದಾರರಿದ್ದು, ಪ್ರತಿಯೊಬ್ಬ ಹಕ್ಕುದಾರರಿಗೂ 2-00 ಎಕರೆ ವಿಸ್ತೀರ್ಣದಂತೆ ಸರ್ವೆ ನಂಬರಿನ ಒಟ್ಟು ವಿಸ್ತೀರ್ಣ 8-00 ಎಕರೆ ಆಗಿದ್ದು, ಮೊದಲನೇ ಹಿಸ್ಸೆದಾರರು ತಮ್ಮ 2-00 ಎಕರೆ ವಿಸ್ತೀರ್ಣದಲ್ಲಿ 1-00 ಎಕರೆ ಮಾರಾಟ ಮಾಡುವ ಸಂಬಂಧ 11ಇ ಅರ್ಜಿ ಸಲ್ಲಿಸಿದ್ದಲ್ಲಿ ಮೊದಲನೇ ಹಿಸ್ಸೆದಾರರಿಗೂ ಮತ್ತು ಎರಡನೆಯ ಹಿಸ್ಸೆದಾರರಿಗೂ ತಮ್ಮ ನಡುವಿನ ಗಡಿ ಬಗ್ಗೆ ತಕರಾರು ಇಲ್ಲದಿದ್ದಲ್ಲಿ ಹಾಗೂ ಮೊದಲನೇ ಮತ್ತು ಎರಡನೇ ಹಿಸ್ಸೆದಾರರು ಅವರ ಹಕ್ಕಿನ ವಿಸ್ತೀರ್ಣವಾದ 2-00 ಎಕರೆ ಪ್ರದೇಶದ ಅನುಭವದಲ್ಲಿದ್ದಲ್ಲಿ ಮೊದಲು 2 ಬ್ಲಾಕುಗಳನ್ನು ಅಳತೆ ಮಾಡುವುದು. 3 ಮತ್ತು 4ನೇ ಹಿಸ್ಸೆದಾರರು ಅವರೂ ಸಹ ತಮ್ಮ ಹಕ್ಕಿನ ವಿಸ್ತೀರ್ಣವಾದ 2-00 ಎಕರೆ ಅನುಭವ ಇದ್ದಲ್ಲಿ 2,3 ಮತ್ತು 4 ನೇ ಹಿಸ್ಸೆದಾರರು ಒಪ್ಪಿಗೆ ನೀಡಿದರೂ, ನೀಡದೇ ಇದ್ದರೂ ಪ್ರತ್ಯೇಕ ಬ್ಲಾಕುಗಳನ್ನು ಸಿದ್ಧಪಡಿಸಿ ಒಂದನೇ ಹಿಸ್ಸೆದಾರರ ಬ್ಲಾಕಿನಲ್ಲಿ 1-00 ಎಕರೆ ವಿಸ್ತೀರ್ಣಕ್ಕೂ ನಕ್ಷೆಯನ್ನು ತಯಾರಿಸಿ ಕಡತ ಸಲ್ಲಿಸುವುದು.

ಒಂದು ವೇಳೆ 3 ಮತ್ತು 4 ನೇ ಹಿಸ್ಸೆದಾರರು ತಮ್ಮ ಹಕ್ಕಿನಂತೆ 2-00 ಎಕರೆ ಬದಲು 1-30 ಗುಂಟೆ ಹಾಗೂ 2-10 ಗುಂಟೆ ವಿಸ್ತೀರ್ಣದ ಅನುಭವದಲ್ಲಿ ಇದ್ದಲ್ಲಿ 3 ಮತ್ತು 4ನೇ ಹಿಸ್ಸೆದಾರರು ಅವರ ಅನುಭವದಂತೆ ನಕ್ಷೆ ತಯಾರಿಸಲು ಒಪ್ಪಿಗೆ ನೀಡಿದರೂ ಸಹ ಮೂರು ಮತ್ತು ನಾಲ್ಕನೇ ಹಿಸ್ಸೆದಾರರಿಗೆ ಒಂದೇ ಬ್ಲಾಕ್ ರಚಿಸಿ 1 ಮತ್ತು 2ನೇ ಹಿಸ್ಸೆದಾರರ ನಡುವೆ ತಕರಾರು ಇಲ್ಲದಿದ್ದಲ್ಲಿ ಮೊದಲನೇ, ಎರಡನೇ ಹಾಗೂ 3,4 ಹಿಸ್ಸೆದಾರರಿಗೆ ಸೇರಿದಂತೆ 3 ಬ್ಲಾಕುಗಳನ್ನು ಹಾಗೂ ಒಂದನೇ ಹಿಸ್ಸೆದಾರರ ಮಾರಾಟವಾದ 1-00 ಎಕರೆ ವಿಸ್ತೀರ್ಣಕ್ಕೆ ನಕ್ಷೆ ತಯಾರಿಸಿ ಒಟ್ಟು 4 ಬ್ಲಾಕುಗಳ ನಕ್ಷೆ ಸಿದ್ಧಪಡಿಸಿ ಕಡತ ಸಲ್ಲಿಸುವುದು. 3 ಮತ್ತು 4ನೇ ಹಿಸ್ಸೆದಾರರ ನಡುವಿನ ಗಡಿ ನಿರ್ಧರಿಸಲು ಪ್ರಕರಣವನ್ನು ನಿಯಮಾನುಸಾರ ಅಂದರೆ ಕರ್ನಾಟಕ ಭೂಕಂದಾಯ ನಿಯಮಗಳು 1966 ನಿಯಮ50 ರಿಂದ 55 ಅನ್ವಯ ಕ್ರಮ ಜರುಗಿಸುವ ಮತ್ತು 3ನೇ ಮತ್ತು 4ನೇ ಹಿಸ್ಸೆದಾರರ ವಿವಾದ ಪರಿಹರಿಸುವ ಜವಾಬ್ದಾರಿ ತಹಸೀಲ್ದಾರ್ ರವರದ್ದಾಗಿರುವುದರಿಂದ ಅಗತ್ಯ ಕ್ರಮ ಕೈಗೊಳ್ಳಲು ಕಡತವನ್ನು ಕಛೇರಿಗೆ ಸಲ್ಲಿಸುವುದು..

ಮೇಲೆ ವಿವರಿಸಿರುವಂತೆ 2 ಮತ್ತು 3ನೇ ಹಿಸ್ಸೆದಾರರು ಅನುಭವದ ವಿಸ್ತೀರ್ಣಕ್ಕೂ, ಆರ್.ಟಿ.ಸಿ. ವಿಸ್ತೀರ್ಣಕ್ಕೂ ವ್ಯತ್ಯಾಸವಿದ್ದಲ್ಲಿ 2 ಮತ್ತು 3ನೇ ಹಿಸ್ಸೆದಾರರಿಗೆ ಒಂದೇ ಬ್ಲಾಕ್ ರಚಿಸಿ 1 ಮತ್ತು 4ನೇ ಹಿಸ್ಸೆದಾರರು ಆರ್.ಟಿ.ಸಿ. ವಿಸ್ತೀರ್ಣದಂತೆ ಅನುಭವದಲ್ಲಿದ್ದಲ್ಲಿ ಅವರಿಗೆ ಪ್ರತ್ಯೇಕ ಬ್ಲಾಕ್ ಮಾಡಿ ಮೊದಲನೆಯ ಹಿಸ್ಸೆದಾರರು ಮಾರಾಟ ಮಾಡುತ್ತಿರುವ 1-00 ಎಕರೆ ವಿಸ್ತೀರ್ಣಕ್ಕೂ ನಕ್ಷೆ ಸಿದ್ಧಪಡಿಸಿ ಕಡತವನ್ನು ಸಲ್ಲಿಸುವುದು.

ಮೇಲೆ ವಿವರಿಸಿರುವಂತೆ 2,3,4ನೇ ಹಿಸ್ಸೆದಾರರು ಆರ್.ಟಿ.ಸಿ. ವಿಸ್ತೀರ್ಣದಂತೆ ಅನುಭವ ಇಲ್ಲದೇ ಇದ್ದಲ್ಲಿ
ಅಂದರೆ ಹೆಚ್ಚು ಅಥವಾ ಕಡಿಮೆ ಅನುಭವದಲ್ಲಿದ್ದರೆ ಹಾಗೂ ಮೊದಲನೇ ಹಿಸ್ಸೆದಾರರು ಆರ್.ಟಿ.ಸಿ. ವಿಸ್ತೀರ್ಣದಂತೆ
2-00 ಎಕರೆ ಅನುಭವದಲ್ಲಿದ್ದಲ್ಲಿ 2,3,4ನೇ ಹಿಸ್ಸೆದಾರರನ್ನು ಸೇರ್ಪಡೆ ಮಾಡಿ ಒಂದೇ ಬ್ಲಾಕ್ ರಚಿಸಿ ಮೊದಲನೇ
ಹಿಸ್ಸೆದಾರರ ಬ್ಲಾಕ್ ಮತ್ತು ಮಾರಾಟದಾರರು ಉದ್ದೇಶಿಸಿರುವ 1-00 ಎಕರೆ ವಿಸ್ತೀರ್ಣಕ್ಕೆ ನಕಾಶೆ ತಯಾರಿಸಿ
ಕಡತವನ್ನು ಸಲ್ಲಿಸುವುದು.

ಆರ್.ಟಿ.ಸಿ.ಯಲ್ಲಿನ ಇತರೇ ಹಿಸ್ಸೆದಾರರು ಎಲ್ಲರೂ ಅಥವಾ ಯಾರಾದರೂ ಒಬ್ಬರು ಪೌತಿಯಾಗಿದ್ದರೆ
ಹಾಗೂ ಅರ್ಜಿದಾರರು ತಮ್ಮ ಹಕ್ಕಿನ ವಿಸ್ತೀರ್ಣದಂತೆ ಅನುಭವದಲ್ಲಿದ್ದಲ್ಲಿ ಅರ್ಜಿದಾರರಿಗೆ ಮತ್ತು ಇತರ
ಪೌತಿಯಾಗಿರುವ ಹಿಸ್ಸೆದಾರರಿಗೂ ಆರ್.ಟಿ.ಸಿ. ವಿಸ್ತೀರ್ಣದಂತೆ ಅನುಭವದಲ್ಲಿದ್ದಲ್ಲಿ ಪ್ರತ್ಯೇಕ ನಕ್ಷೆಗಳನ್ನು ಮೃತ
ಹಕ್ಕುದಾರರ ಹೆಸರಿಗೆ ಪ್ರತ್ಯೇಕ ಬ್ಲಾಕುಗಳನ್ನು ರಚಿಸುವುದು. ಮೃತ ಹಕ್ಕುದಾರರ ಹೆಸರಿಗೆ ಪ್ರತ್ಯೇಕ ಬ್ಲಾಕ್
ರಚಿಸುವುದು, ಸರಿಯಾದ ಕ್ರಮವಲ್ಲದಿದ್ದರೂ ಸಹ ಪರವಾನಗಿ ಭೂಮಾಪಕರು ಮೃತ ಹಕ್ಕುದಾರರ
ಉತ್ತರಾಧಿಕಾರಿಗಳ ಬಗ್ಗೆ ಅನಗತ್ಯ ನಿರ್ಧಾರ ಕೈಗೊಳ್ಳಲು ಇರುವ ಅವಕಾಶವನ್ನು ತಪ್ಪಿಸಿ ನಿಯಮಾನುಸಾರ
ಉತ್ತರಾಧಿಕಾರಿಗಳ ಹಕ್ಕುಗಳನ್ನು ನೀಡುವ ಬಗ್ಗೆ ಸಕ್ಷಮ ಪ್ರಾಧಿಕಾರಿಗಳಾದ ಗ್ರಾಮಲೆಕ್ಕಿಗರು/ಕಂದಾಯ
ನಿರೀಕ್ಷಕರು ಕ್ರಮ ಜರುಗಿಸುವಂತೆ ನಕ್ಷೆ ತಯಾರಿಸಿದ ನಂತರ ಕ್ರಮ ಕೈಗೊಳ್ಳಲು ಕಡತವನ್ನು ಸಲ್ಲಿಸುವುದು
ಸೂಕ್ತ ಕ್ರಮವಾಗಿರುತ್ತದೆ. ಮೃತ ವ್ಯಕ್ತಿಗಳ ಹೆಸರಿಗೆ ನಕ್ಷೆಯನ್ನು ತಯಾರಿಸಿ ಕಡತವನ್ನು ಸಲ್ಲಿಸಿದ ಕೂಡಲೇ
ಪ್ರಕರಣವನ್ನು ಗ್ರಾಮಲೆಕ್ಕಿಗರಿಗೆ/ಕಂದಾಯ ನಿರೀಕ್ಷಕರಿಗೆ ವಹಿಸಿದಲ್ಲಿ ಈ ರೀತಿ ಪ್ರತ್ಯೇಕಿಸಲ್ಪಟ್ಟ ಬ್ಲಾಕುಗಳಿಗೆ ಅರ್ಹ
ಉತ್ತರಾಧಿಕಾರಿಗಳನ್ನು ಮ್ಯುಟೇಷನ್ ಪ್ರಕ್ರಿಯೆ ಮೂಲಕ ಸಕ್ರಮಗೊಳಿಸಿ ದಾಖಲೆಗಳನ್ನು ಕಾಲೋಚಿತಗೊಳಿಸಿ
ಅವಕಾಶ ಕಲ್ಪಿಸುವ ದೃಷ್ಟಿಯಿಂದ ಈ ಕ್ರಮವು ಅನಿವಾರ್ಯವಾಗಿರುತ್ತದೆ. ತಪ್ಪಿದಲ್ಲಿ ಅಳತೆ ಸಮಯದಲ್ಲಿ
ಪರವಾನಗಿ ಭೂಮಾಪಕರು ಉತ್ತರಾಧಿಕಾರಿಗಳನ್ನು ನಿರ್ಧರಿಸುವ ಕಾರ್ಯವಿಧಾನ ಮತ್ತು ಅಧಿಕಾರವಿಲ್ಲದ
ಕಾರ್ಯಕ್ಷೇತ್ರದಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ. ಆದ್ದರಿಂದ ಆರ್.ಟಿ.ಸಿ.ಯಲ್ಲಿ ನಮೂದಾಗಿರುವ
ಹಕ್ಕಿನ ವಿಸ್ತೀರ್ಣದಂತೆ ಮೃತ ಹಕ್ಕುದಾರರ ಅನುಭವದ ಬಗ್ಗೆ ಮಾಹಿತಿ ದೊರಕಿದಲ್ಲಿ ತಪ್ಪದೇ ಪ್ರತ್ಯೇಕ
ಬ್ಲಾಕುಗಳನ್ನು ಅರ್ಜಿದಾರರ ನಕ್ಷೆಯೊಂದಿಗೆ ಪೂರೈಸುವುದು.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು

1. ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ. ಮೈಸೂರು / ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ.
6. ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ, ಇವರಿಗೆ
8. ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು.
9. ಅಧ್ಯಕ್ಷರು, ಕರ್ನಾಟಕ ರಾಜ್ಯದ ಪರವಾನಗಿ ಭೂಮಾಪಕರ ಸಂಘ, ಮಹಾವೀರ ಕಾಂಪ್ಲೆಕ್ಸ್, ಕೆ.ಜಿ. ರೋಡ್, ಬೆಂಗಳೂರು.

Sslr-est
G